ಕೇಂದ್ರದಿಂದ ರಾಜ್ಯಕ್ಕೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಹಣ ಬಿಡುಗಡೆ.

195(282)

ಶ್ರೀ ನಾರಾಯಣ ಸ್ವಾಮಿ ಎ.(ಆನೇಕಲ್): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕೇಂದ್ರದಿಂದ ರಾಜ್ಯಕ್ಕೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿದೆಯೆ?

ಆ. ಬಿಡುಗಡೆಯಾಗಿದ್ದಲ್ಲಿ ವಾರ್ಷಿಕ ಅನುದಾನವೆಷ್ಟು : 2001ನೇ ಸಾಲಿಗೆ ಬಿಡುಗಡೆಯಾದ ಮೊತ್ತವೆಷ್ಟು?

ಇ. ಸದರಿ ಯೋಜನೆಯಲ್ಲಿ ಹಣ ಬಿಡುಗಡೆಯಾಗಿದ್ದರೂ ಬಳಸಿಕೊಳ್ಳದ ಜಿಲ್ಲೆಗಳು ಯಾವುವು; ಇದಕ್ಕೆ ಕಾರಣಗಳೇನು?

ಈ. ಇದಕ್ಕೆ ಅವಕಾಶ ನೀಡಿರುವಂತಹ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು):

ಅ. ಹೌದು. ಬಿಡುಗಡೆಯಾಗಿದೆ.

ಆ. ವಾರ್ಷಿಕ ಅನುದಾನ ರೂ.6128.00 ಲಕ್ಷಗಳು. ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ರೂ.4723.28 ಲಕ್ಷಗಳು.

ಇ. ಬಿಡುಗಡೆಯಾದ ಅನುದಾನವನ್ನು ರಾಜ್ಯದ ಎಲ್ಲ ಜಿಲ್ಲೆಗಳು ಬಳಸಿಕೊಂಡಿರುತ್ತವೆ.

ಈ. ಪ್ರಶ್ನೆ ಉದ್ಭವಿಸುವುದಿಲ್ಲ.

ಗುರುಭವನ ನಿರ್ಮಿಸಲು ನಿವೇಶನ ಒದಗಿಸುವುದು.

196(283)